ಮಗನನ್ನು ನಿಲ್ಲಿಸಲು ಕುಮಾರಸ್ವಾಮಿ ಹೈಡ್ರಾಮಾ

ಒಕ್ಕಲಿಗರ ಟ್ರಂಪ್ ಕಾರ್ಡ್ ತಂದು ಚುನಾವಣೆ ಮಾಡ್ತಾರೆ: ಶಿವಲಿಂಗೇಗೌಡ ವಾಗ್ದಾಳಿ | ಕೋಡಂಬಳ್ಳಿ ಗ್ರಾಮದಲ್ಲಿ ಕಾಂಗ್ರೆಸ್ ಸಮನ್ವಯ ಸಭೆ

• **ಕನ್ನಡಪ್ರಭ ವಾರ್ತೆ** ಚನ್ನಪಟ್ಟಣ

ಕೇಂದ್ರ ಸಚಿವ ಕುಮಾರಸ್ವಾಮಿ ಪುತ್ರ ನಿಖಿಲ್ ಎರಡು ಬಾರಿ ಸೋತಿದ್ದಾನೆ. ಆವನಿಗೆ ಪುನರ್ಜನ್ಮ ಬೇಕು ಅಂತಾ ಚನ್ನಪಟ್ಟಣಕ್ಕೆ ತಂದು ನಿಲ್ಲಿಸಿದ್ದಾರೆ. ಮಗನನ್ನು ನಿಲ್ಲಿಸಲು ಅವರು ಇಷ್ಟೆಲ್ಲ ಡ್ರಾಮಾ ಮಾಡಿದ್ದಾರೆ ಎಂದು ಶಾಸಕ ಶಿವಲಿಂಗೇಗೌಡ ಆರೋಪಿಸಿದರು.

ತಾಲೂಕಿನ ಕೋಡಂಬಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಯೋಗೇಶ್ವರ್ ವಿಧಾನ ಪರಿಷತ್ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ನಮ್ಮದೇ ಪಕ್ಷದಿಂದ ಚುನಾವಣೆಗೆ ನಿಂತ್ಕೊಳ್ಳಿ ಅಂದ್ರು. ಚನ್ನಪಟ್ಟಣಕ್ಕೆ ಕರೆದುಕೊಂಡು ಬಂದು ನಾಟಕ ಮಾಡ್ತಾ ಇದ್ದರು. ಚನ್ನಪಟ್ಟಣ ಜನ ಸ್ವಾಭಿಮಾನಕ್ಕೆ ಮತ ಕೊಡಬೇಕು. ನಾಟಕ, ಸ್ವಾರ್ಥಕ್ಕೆ ಮತ ಕೊಡಬೇಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದನ್ನು ತೆಗೆದಿದ್ದು ಯಾರು? ಯೋಗೇಶ್ವರ್ ಸಾಮರ್ಥ್ಯ ಏನು ಅಂತಾ ಕುಮಾರಸ್ವಾಮಿಗೆ ಗೊತ್ತಿಲ್ವಾ, ನಾವೆಲ್ಲಾ ಒಕ್ಕಲಿಗರಂತೆ ಅವರಿಗೆ ಕಾಣೊಲ್ಲವಾ, ಡಿ.ಕೆ.ಶಿವಕುಮಾರ್, ಸುರೇಶ್ ಎಲ್ಲ ಒಕ್ಕಲಿಗರಲ್ವಾ, ಅವರು ಮಾತ್ರ ಒಕ್ಕಲಿಗರಾ, ಕುಮಾರಸ್ವಾಮಿ ಇದೊಂದು ಟ್ರಂಪ್ ಕಾರ್ಡ್ ತಂದು ಚುನಾವಣೆ ಮಾಡ್ತಾರೆ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಆಶೀರ್ವಾದದಿಂದಲೇ ದೇವೇಗೌಡರು ಪ್ರಧಾನಮಂತ್ರಿ ಆಗಿದ್ದು ಅನ್ನೋದನ್ನ ಅವರೆಂದೂ ಮರೆಯಬಾರದು. ಕುಮಾರಸ್ವಾಮಿ 25 ಸೀಟು ತಗೊಂಡ್ರು ಮುಖ್ಯಮಂತ್ರಿ ಆಗ್ತಾರೆ. ಅವರಿಗೆ ಅದೊಂದು ಅದೃಷ್ಟ ಇದೆ. ಕೊಟ್ಟಿದ್ದನ್ನು ಉಳಿಸಿಕೊಳ್ಳುವ ಶಕ್ತಿ ಅವರಿಗೆ ಇಲ್ಲ. ನನ್ನ ಜನ್ಮ ಇರೋವರೆಗೂ ಬಿಜೆಪಿ ಸಹವಾಸ ಮಾಡೋಲ್ಲ ಅಂದು ಇವಾಗ ಹೋಗಿದ್ದೀರಲ್ಲ ಎಂದು ಕಿಡಿಕಾರಿದರು.

ಹುಟ್ಟಿದ್ರೆ ಇನ್ನೊಂದು ಜನ್ಮದಲ್ಲಿ ಮುಸ್ಲಿಂ ಆಗಿ ಹುಟ್ಟುತ್ತೀನಿ ಅಂದ್ರಲ್ಲ. ಇವಾಗ ಯಾರ ಸಹವಾಸ ಮಾಡಿದ್ದೀರಿ. ಇದೇ ಕೆಲಸ ಯಾರಾದರು ಬಡವರು ಮಾಡಿದ್ರೆ ಎಂತಹ ಮಾತು ಆಡ್ತಾ ಇದ್ರಿ? ಕುಮಾರಸ್ವಾಮಿ ರಾಜಕೀಯ ಜೀವ ಉಳಿಸಿಕೊಳ್ಳಲು ಬಿಜೆಪಿ ಜೊತೆ ಸೇರಿಕೊಂಡ್ರು. ಅವರು ಕುಟುಂಬಕ್ಕೋಸ್ಕರ ಏನು ಬೇಕಾದ್ರು ಮಾಡ್ತಾರೆ ಎಂದು ವಾಗ್ದಾಳಿ ಮಾಡಿದರು.

ನಿಮಗೆ ಒಬ್ಬ ಸ್ವಾಭಿಮಾನಿ ಬೇಕು. ಯೋಗೇಶ್ವರ್ ಗೆಲ್ಲಿಸೋ ಮುಖಾಂತರ ನಿಮ್ಮ ಸ್ವಾಭಿಮಾನ ಉಳಿಸಬೇಕು. ನ.13ರಂದು ನಡೆಯುವ ಚುನಾವಣೆಯಲ್ಲಿ ಹೊರಗಿನವರನ್ನು ಜಿಲ್ಲೆಯಿಂದ ಕಳಿಸಬೇಕು. ಯೋಗೇಶ್ವರ್‌ಅವರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಇಲ್ಲಿಂದ ತಿರುವು ಪ್ರಾರಂಭ: ರಾಜ್ಯದಲ್ಲಿ ಮೂರು ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯುತ್ತಿದೆ. ಚನ್ನಪಟ್ಟಣ ಕ್ಷೇತ್ರ ಸಾಕಷ್ಟು ಸದ್ದು ಮಾಡ್ತಿದೆ. ನಿಮ್ಮ ಜಿಲ್ಲೆಯವರೇ ನಿಮ್ಮವರೇ ಸಿಎಂ ಆಗ್ತಾರೆ. ಈ ಚುನಾವಣೆ ಫಲಿತಾಂಶ ನಿಜವಾಗಿಯೂ ಅದನ್ನು ತೋರಿಸುತ್ತದೆ. ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರ ನಾಯಕತ್ವ ಇರುತ್ತದೆ. ಈ ಜಿಲ್ಲೆ ದೊಡ್ಡ ಮಟ್ಟದಲ್ಲಿ ಉನ್ನತವಾಗಿ ಬೆಳೆಯುತ್ತದೆ. ರಾಜ್ಯ ರಾಜಕಾರಣದ ತಿರುವು ಇಲ್ಲಿಂದ ಪ್ರಾರಂಭವಾಗುತ್ತದೆ ಎಂದು ಶಿವಲಿಂಗೇಗೌಡರು ಹೇಳಿದರು.

ಡಿ.ಕೆ.ಸುರೇಶ್‌ರನ್ನು ನಿಲ್ಲಿಸಿ ಗೆಲ್ಲಿಸಿಕೊಳ್ಳೊ ಶಕ್ತಿ ಡಿ.ಕೆ.ಶಿವಕುಮಾರ್‌ಅವರಿಗೆ ಇರಲಿಲ್ವಾ? ತ್ಯಾಗ ಮಾಡಿ ಸಹೋದರನನ್ನು ನಿಲ್ಲಿಸದೇ ಯೋಗೇಶ್ವರ್ ಅವರನ್ನು ನಿಲ್ಲಿಸಿದ್ದಾರೆ. ಕೇಂದ್ರದ ಬಿಜೆಪಿಯವರು ರಾಜ್ಯಕ್ಕೆ ಏನು ಮಾಡಿಲ್ಲ. ನಮಗೆ ಬರಬೇಕಾದ ಜಿಎಸ್‌ಟಿ ಹಣವನ್ನು ತಿನ್ಕೊಂಡು ಕೂತಿದ್ದಾರೆ ಎಂದು ದೂರಿದರು.


ಕೋಡಂಬಳ್ಳಿ ಗ್ರಾಮದಲ್ಲಿ ಕಾಂಗ್ರೆಸ್ ಸಮನ್ವಯ ಸಭೆಯಲ್ಲಿ ಪಕ್ಷದ ಮುಖಂಡನ್ನು ಸನ್ಮಾನಿಸಲಾಯಿತು.

ಯೋಗಿಗೆ ಎಚ್ಡಿಕೆ ಸೀಟು ಬಿಟ್ಟು ಕೊಡಬಹುದಿತ್ತಲ್ಲ: ಡಿಕೆ ಸುರೇಶ್

ಚನ್ನಪಟ್ಟಣ: ಚನ್ನಪಟ್ಟಣದಲ್ಲಿ ಸಿ.ಪಿ.ಯೋಗೇಶ್ವರ್ ಕೆರೆ ತುಂಬಿಸಿದರು ಎಂದು ನೀವು ಅವರಿಗೆ ಅಂತ ಕಿರೀಟ ಹಾಕಿದಿರಿ, ಬೆಳ್ಳಿಗದೆ ಕೊಟ್ಟು ಮೆರವಣಿಗೆ ಮಾಡಿದಿರಿ. ಆದರೆ, ಚುನಾವಣೆಯಲ್ಲಿ ನೀರು ಕೊಟ್ಟವರಿಗೆ ನೀರು ಬಿಟ್ಟುಬಿಟ್ರಿ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಕೋಡಂಬಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಯೋಗೇಶ್ವರ್ ಪಾಪ ಏನು ತಪ್ಪು ಮಾಡಿದರು ಎಂದು ಸೋತರು. ಯೋಗೇಶ್ವರ್ ಮೇಲೆ ಎರಡು ಬಾರಿ ಗೆದ್ದಿದ್ದೀನಿ ಅಂತ ಹೇಳಿ ಎಚ್‌ಡಿಕೆ ಅವರಿಗೆ ಟಿಕೆಟ್ ಕೊಡಬಹುದಿತ್ತು. ಆಗ ಅವರ ಹೃದಯ ಶ್ರೀಮಂತ್ರಿಕೆ ಗೊತ್ತಾಗೊದು. ಅವರ ಹೃದಯ ದೊಡ್ಡದೋ, ಚಿಕ್ಕದೋ ಗೊತ್ತಾಗೋದು ಎಂದು ಹೇಳಿದರು.

ಅವರು ತಮ್ಮನ್ನು ನಂಬಿಕೊಂಡು ಬಂದವರಿಗೆ ಏನು ಮಾಡಿದರು? ಸಭೆ ಮಾಡಿ ಮಗನಿಗೆ ಚನ್ನಪಟ್ಟಣ ಪ್ರವಾಸ ಮಾಡು ಅಂದರು. ಆಗ ಯೋಗೇಶ್ವರ್ ನಿಮ್ಮ ಕಣ್ಣಿಗೆ ಕಾಣಲಿಲ್ವಾ? ನಿಮ್ಮ ಉದ್ದೇಶ ಗೊತ್ತು, ನೀವು ರಾಜೀನಾಮೆ ಕೊಟ್ಟಾಗಲೇ ಮಗನಿಗೆ ಟಿಕೆಟ್ ಕೊಡುವ ತೀರ್ಮಾನ ಮಾಡಿದ್ದಿರಿ ಎಂದು ಎಚ್‌ಡಿಕೆ ವಿರುದ್ಧ ವಾಗ್ದಾಳಿ ನಡೆಸಿದರು.

ನಿಮ್ಮನ್ನು ನಂಬಿ ಬಂದವರಿಗೆ ಏನು ಮಾಡಿಲ್ಲ. ಯಾರಿಗೂ ರಾಜಕೀಯವಾಗಿ ಶಕ್ತಿ ತುಂಬುವ ಕೆಲಸ ಮಾಡಿಲ್ಲ. ಎಲ್ಲ ಒಕ್ಕಲಿಗ ನಾಯಕರನ್ನೂ ತುಳಿಯುವ ಕೆಲಸ ಮಾಡಿದಿರಿ. ಅವರವರ ನಡುವೆಯೇ ಕಿತ್ತಾಟ ಮಾಡಿಸಿದರು. ಯಾರನ್ನೂ ಅವರು ಸಹಿಸಿಕೊಳ್ಳಲ್ಲ. ಯಾರ ಬೆಳವಣಿಗೆಯೂ ಅವರಿಗೆ ಬೇಕಿಲ್ಲ ಎಂದು ಕಿಡಿಕಾರಿದರು.

ಇದೆಲ್ಲ ನೋಡಿ ಅನಿರೀಕ್ಷಿತವಾಗಿ ಸಿಪಿವೈ ಕಾಂಗ್ರೆಸ್‌ಗೆ ಬಂದ್ರು. ನಾವು ಒಂದೇ ಜಿಲ್ಲೆಯವರು, ಅಭಿವೃದ್ಧಿ ವಿಚಾರವಾಗಿ ಒಂದಾಗಿದ್ದೇವೆ. ಯೋಗೇಶ್ವರ್ ಜೊತೆ ವೇದಿಕೆ ಹಂಚಿಕೊಳ್ಳುತ್ತೇನೆ ಎಂದು ನಾನ್ಯಾವತ್ತೂ ಕನಸಿನಲ್ಲೂ ಅಂದುಕೊಂಡಿರಲಿಲ್ಲ. ನಮ್ಮ ಪಕ್ಷದಸಿದ್ಧಾಂತಗಳನ್ನು ಒಪ್ಪಿಕೊಂಡು ಅವರು ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ದಾರೆ. ಇಂದು ನಾವೆಲ್ಲರೂ ಸೇರಿ ಒಗ್ಗಟ್ಟಿನಿಂದ ಅವರನ್ನು ಗೆಲ್ಲಿಸೋಣ ಎಂದು ಸುರೇಶ್ ಹೇಳಿದರು.

ಬಾಯ್ತಪ್ಪಿ ಬಿಜೆಪಿ ಸರ್ಕಾರವೆಂದ ಸಿಪಿವೈ!



ಚನ್ನಪಟ್ಟಣ: ಕಾಂಗ್ರೆಸ್ ಅಭ್ಯರ್ಥಿ ಯೋಗೇಶ್ವರ್ ಅವರು ತಾಲೂಕಿನ ಕೋಡಂಬಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಸಮನ್ವಯ ಸಭೆಯಲ್ಲಿ ಭಾಷಣ ಮಾಡುವ ವೇಳೆ ಬಾಯ್ತಪ್ಪಿ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ ಅಂತ ಹೇಳಿಬಿಟ್ಟರು. ಕೂಡಲೇ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ಸರ್ಕಾರ ಎಂದು ಕೂಗಿಕೊಂಡರು. ತಕ್ಷಣ ಸಾವರಿಸಿಕೊಂಡು ತಪ್ಪನ್ನು ತಿದ್ದಿಕೊಂಡು ಮತ್ತೆ ಕಾಂಗ್ರೆಸ್ ಸರ್ಕಾರ ಎಂದು ಯೋಗೇಶ್ವರ್ ತಮ್ಮ ಭಾಷಣ ಮುಂದುವರಿಸಿದರು.

ಎಚ್ಡಿಕೆಗೆ ಚನ್ನಪಟ್ಟಣ ಕ್ಷೇತ್ರದಲ್ಲಿ ಎಷ್ಟು ಕೆರೆ ಇದೆ ಎಂದೇ ಗೊತ್ತಿಲ್ಲ

ಇದು ನನ್ನ 10ನೇ ಚುನಾವಣೆ: ಯೋಗೇಶ್ವರ್

ಚನ್ನಪಟ್ಟಣ: ಕುಮಾರಸ್ವಾಮಿ ಅವರ ರಾಜಕೀಯ ಮಹತ್ವಾಕಾಂಕ್ಷೆಯಿಂದ ಚನ್ನಪಟ್ಟಣಕ್ಕೆ ಉಪಚುನಾವಣೆ ಎದುರಾಗಿದೆ. ಅವರು ಕ್ಷೇತ್ರದಲ್ಲಿ ಶಾಸಕರಾಗಿದ್ದಾಗ ಸರಿಯಾಗಿ ಬರಲಿಲ್ಲ, ಮೊನ್ನೆ ಚನ್ನಪಟ್ಟಣದಲ್ಲಿ 150 ಕೆರೆ ತುಂಬಿಸಿದ್ದೇವೆ ಅಂದಿದ್ದಾರೆ. ಅವರಿಗೆ ಚನ್ನಪಟ್ಟಣದಲ್ಲಿ ಎಷ್ಟು ಕೆರೆ ಇದೆ ಅಂತ ಗೊತ್ತಿಲ್ಲ ಎಂದು ಕಾಂಗ್ರೆಸ್ ಅಭ್ಯರ್ಥಿ ಯೋಗೇಶ್ವರ್ ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದರು.

ತಾಲೂಕಿನ ಕೋಡಂಬಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕಾಂಗ್ರೆಸ್ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಚನ್ನಪಟ್ಟಣ ತಾಲೂಕಿನಲ್ಲಿ ಇದು ನನ್ನ 10ನೇ ಚುನಾವಣೆ. ಈ ಉಪಚುನಾವಣೆ ಬರುತ್ತೆ ಅಂತ ಅಂದುಕೊಂಡಿರಲಿಲ್ಲ. ಈ ಚುನಾವಣೆಯಲ್ಲಿ ನನ್ನನ್ನು ಆಶೀರ್ವದಿಸಿ ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಹೊಸ ಯೋಜನೆ: ನಾನು, ಸುರೇಶ್ ಸೇರಿ ಒಂದು ಹೊಸ ಯೋಜನೆ ಬಗ್ಗೆ ಆಲೋಚನೆ ಮಾಡಿದ್ದೇವೆ. ಕೆಆರ್‌ಎಸ್ ನಿಂದ ಮಾರ್ಕೋನಹಳ್ಳಿ ಡ್ಯಾಂಗೆ ನೀರು ತಂದು ಅದನ್ನ ಕಣ್ವ, ಇಗ್ಗಲೂರು ಡ್ಯಾಂಗೆ ತರಬಹುದು. ಆ ಕುರಿತು ಚಿಂತಿಸುತ್ತಿದ್ದೇವೆ ಎಂದರು.

ಕುಮಾರಸ್ವಾಮಿ ಎರಡು ಬಾರಿ ಗೆದ್ದರೂ ಒಂದೇ ಒಂದು ಕೆರೆ ತುಂಬಿಸಲಿಲ್ಲ. ಶಾಸಕ ಶಿವಲಿಂಗೇಗೌಡರಿಗೆ ಕುಮಾರಸ್ವಾಮಿಯವರ ಎಲ್ಲಾ ಮರ್ಮಗಳು ಗೊತ್ತು. ಅವರ ಪ್ಲಾನ್‌ಗಳು ನಮ್ಮ ಬಹುತೇಕ ನಾಯಕರಿಗೆ ಗೊತ್ತಿದೆ. ನನ್ನ ಮೇಲೆ ಯಾಕಿಂಗೆ ಅವರ ಮನೆಯವರು ಮುಗಿಬಿಳ್ತಿದ್ದಾರೋ ನನಗಂತೂ ಗೊತ್ತಿಲ್ಲ. ನಾನೇನು ತಪ್ಪುಮಾಡಿದ್ದೀನಿ, ನನ್ನ ಮೇಲೆ ಯಾಕೆ ಹೀಗೆ ಬೀಳ್ತಾರೆ ಎಂದು ಯೋಗೇಶ್ವರ್ ಪ್ರಶ್ನಿಸಿದರು.

ಚನ್ನಪಟ್ಟಣ ಕ್ಷೇತ್ರಕ್ಕೆ ಕುಮಾರಸ್ವಾಮಿ ಬಂದ್ರು, ಅವರ ಪತ್ನಿ ಬಂದ್ರು ಈಗ ಅವರ ಮಗ ಬಂದಿದ್ದಾರೆ. ಮೊನ್ನೆ 500 ಬಸ್ ಮಾಡಿ ಜನರನ್ನು ಸೇರಿಸಿ ನಾಮಪತ್ರ ಸಲ್ಲಿಕೆ ಮಾಡಿದರು. ಅವರು ಕೇಂದ್ರ ಸರ್ಕಾರದಲ್ಲಿ ಮಂತ್ರಿ ಆಗಿದ್ದಾರೆ. ಎಷ್ಟಾದರೂ ಹಣ ತಂದು ಚುನಾವಣೆ ಮಾಡೋಕೆ ನಿಂತಿದ್ದಾರೆ. ಈ ಬಗ್ಗೆ ಚುನಾವಣಾ ಆಯೋಗವನ್ನು ಪ್ರಶ್ನಿಸಿದೆ. ಈಗ ಚುನಾವಣಾ ಆಯೋಗ ಕೇಸ್ ಹಾಕಿ 96 ಬಸ್‌ಗಳನ್ನು ಸೀಜ್ ಮಾಡಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ ಎಂದು ಯೋಗೇಶ್ವರ್ ಹೇಳಿದರು.

ನನ್ನ ಬಳಿ ಹಣವಿಲ್ಲ: ಕುಮಾರಸ್ವಾಮಿಗೆ ಇರೋದು ಒಂದೇ ಅಸ್ತ್ರ, ಯಥೇಚ್ಛವಾಗಿ ಹಣ ಸುರಿದು ಚುನಾವಣೆ ಮಾಡೋದು. ನನ್ನ ಬಳಿ ಅಷ್ಟು ಹಣ ಇಲ್ಲ, ಕ್ಷೇತ್ರದಲ್ಲಿ ಎರಡು ಬಾರಿ ಚುನಾವಣೆಯಲ್ಲಿ ಸೋತಿದ್ದೇನೆ. ಈ ಬಾರಿ ಜನರೇ ನನ್ನ ಪರವಾಗಿ ಚುನಾವಣೆ ಮಾಡಿ ಗೆಲ್ಲಿಸ್ತಾರೆಂಬ ನಂಬಿಕೆ ಇದೆ. ನನ್ನನ್ನು ಎಲ್ಲರೂ ಪಕ್ಷಾಂತರಿ, ಪಕ್ಷಾಂತರಿ ಅಂತಾರೆ. ಯಾಕೆ ಕಾಂಗ್ರೆಸ್ ಬಿಟ್ಟು ಹೋಗಿದ್ರಿ ಅಂತ ಕೇಳ್ತಾರೆ. ಅವತ್ತು ನೀರಾವರಿ ಯೋಜನೆಗಾಗಿ ಪಕ್ಷ ಬಿಟ್ಟು ಹೋಗಿದ್ದೆ. ಈಗ ಕ್ಷೇತ್ರದ ಅಭಿವೃದ್ಧಿಗಾಗಿ ನಾನು ಮತ್ತೆ ಪಕ್ಷಾಂತರ ಮಾಡಿದ್ದೇನೆ. ಈಗ ಗೆಲ್ಲಿಸಿ ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿ ಮಾಡುತ್ತೇನೆ ಎಂದರು.

ಸ್ವಾಧೀನ ಸೂಚನೆ (ನಿಯಮ 8 (1)ರಡಿ – ಸಿರಾಸ್ತಿಗಾಗಿ)

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಅಧಿನಿಯಮ 2002ರ ಅನ್ವಯ ಕೆಳಗಸಿದಾರರು **ಐಐಎಫ್‌ಎಲ್ ಹೋಮ್ ಫೈನಾನ್ಸ್ ಲಿಮಿಟೆಡ್.,** (ಈ ಹಿಂದೆ ಇಂಡಿಯಾ ಇನ್ಫೋಲೈನ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್) ಐಐಎಫ್‌ಎಲ್–ಹೆಚ್‌ಎಫ್‌ಎಲ್) ನ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು, ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 3 ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ, ಕೆಳಗೆ ತಿಳಿಸಿದ ದಿನಾಂಕದಂದು ನೋಟೀಸಿನಲ್ಲಿ ತಿಳಿಸಿರುವ ಮೊಬಲಗುಗಳ ಜೊತೆಗೆ ಸದರ ಬಡ್ಡಿ ಪ್ರಾಸಂಗಿಕ ಖರ್ಚುಗಳು, ವೆಚ್ಚಗಳು, ಪ್ರಭಾರಗಳು, ಇತ್ಯಾದಿಗಳನ್ನು ಸದರಿ ನೋಟೀಸಿನಲ್ಲಿ ತಿಳಿಸಿರುವ ದಿನಗಳ ಒಳಗೆ ಮರುಪಾವತಿ ಮಾಡುವಂತೆ ತಿಳಿಸಿ, ಕೆಳಗೆ ತಿಳಿಸಿದಷ್ಟು ಸಾಲಗಾರರು ಸದರಿ ಅಧಿನಿಯಮದ ಪ್ರಕರಣ 13(4)ರ ಅನ್ವಯ ಡಿಮ್ಯಾಂಡ್ ನೋಟೀಸ್ ನೀಡಿದ್ದರು. ಮೇಲೆ ತಿಳಿಸಿರುವ ಸಾಲಗಾರರು **ಐಐಎಫ್‌ಎಲ್ ಹೆಚ್ ಎಫ್‌ಎಲ್**ಗೆ ಹಣವನ್ನು ಮರುಪಾವತಿ ಮಾಡಲು ವಿಫಲವಾಗಿರುವುದರಿಂದ, ಸದರಿ ನಿಯಮಗಳ, ನಿಯಮ (8)ನ್ನು ಓದಿಕೊಂಡಂತೆ ಸದರಿ ಅಧಿನಿಯಮ 13ರ ಅನ್ವಯ ಅವರಿಗೆ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಕೆಳಸಿದಾರರು ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿಯ ಸ್ವಾಧೀನ ಪಡಿಸಿಕೊಂಡಿರುವುದಾಗಿ ನಿರ್ದಿಷ್ಟವಾಗಿ ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಸೂಚಿಸಲಾಗಿದೆ. **ಐಐಎಫ್‌ಎಲ್ ಹೆಚ್‌ಎಫ್‌ಎಲ್**ಗೆ ಆಸ್ತಿಯನ್ನು ಅಡಮಾನ ಮಾಡಿರುವವರಿಂದ ಈ ಆಸ್ತಿಯ ಬಗ್ಗೆ ಯಾರೂ ವ್ಯವಹರಿಸಬಾರದೆಂದು ಮೇಲೆ ತಿಳಿಸಿರುವ ಸಾಲಗಾರರು ಹಾಗೂ ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಮಾರಾಟ ಅಥವಾ ವರ್ಗಾವಣೆಗೆ ನಿಗದಿಪಡಿಸಿದ ದಿನಾಂಕದ ಮೊದಲು ಯಾವುದೇ ಸಮಯದಲ್ಲಿ **ಐಐಎಫ್‌ಎಲ್ ಹೆಚ್‌ಎಫ್‌ಎಲ್** ಸುರಕ್ಷಿತ ಸ್ವತ್ತುಗಳನ್ನು ವರ್ಗಾಹಿಸಲಾಗುವುದಿಲ್ಲ ಮತ್ತು ಸುರಕ್ಷಿತ ಸ್ವತ್ತುಗಳ ವರ್ಗಾವಣೆ ಅಥವಾ ಮಾರಾಟಕ್ಕಾಗಿ **ಐಐಎಫ್‌ಎಲ್ ಹೆಚ್‌ಎಫ್‌ಎಲ್** ನಿಂದ ಯಾವುದೇ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ.

ಸಾಲಗಾರರ / ಸಹ–ಸಾಲಗಾರರ ಹೆಸರು	ಸುರಕ್ಷಿತ ಸ್ವತ್ತಿನ ವಿವರ (ಸ್ಥಿರಾಸ್ತಿ)	ಬರಬೇಕಾದ ಬಾಕಿ ಮೊತ್ತ (ರೂ)ಗಳಲ್ಲಿ	ಡಿಮ್ಯಾಂಡ್ ನೋಟೀಸ್ ದಿನಾಂಕ	ಸ್ವಾಧೀನತೆಯ ದಿನಾಂಕ
ಶ್ರೀ ಎಂ ಅಬ್ದುಲ್ ಜಮೀಲ್, ಶ್ರೀಮತಿ ಫರ್ಹಾನ್ ಉನ್ನಿಸಾ, ಶ್ರೀಮತಿ ಸೈಯದಾ ಸಾದಿಕ (ಪ್ರಾಪರ್ಟಿಸ್ ಸಂಖ್ಯೆ. 965682)	ಆಸ್ತಿ ಖಾನೇಶುಮಾರಿ ಸಂ. 826/828+1521/2154+1520/215 6 & 2066, 1519/2156/2066, 828/1519/2156/2066, ನಲ್ಲಂದಹಾಡಿ ಮೊಹಲ್ಲಾ, ರಾಮನಗರ ಟೌನ್–562159, ಕರ್ನಾಟಕ. ಪ್ರದೇಶದ ವಿಸ್ತೀರ್ಣ (ಚಿಆಡಿಗಳಲ್ಲಿ). ಆಸ್ತಿ ಪ್ರಕಾರ: ಭೂಮಿಯಿ_ಪ್ರದೇಶ, ಕಾರ್ಪೆಟ್_ಏರಿಯಾ, ಬಿಲ್ಟ್_ಅಪ್_ಏರಿಯಾ ಆಸ್ತಿ ಪ್ರದೇಶ: 2601.00, 2819.20, 3524.00. ಚಕ್ಕುಬಂದಿ: ಉತ್ತರ: ರಸ್ತೆ, ದಕ್ಷಿಣ: ಶ್ರೀ. ವಹೀದ್ ರವರ ಆಸ್ತಿ, ಪೂರ್ವ: ಶ್ರೀ ಯೂನುಭ್ ರವರ ಆಸ್ತಿ, ಪಶ್ಚಿಮ: ರಸ್ತೆ ಮತ್ತು ಚಮನ್‌ಶಹಪಾಲಿ ದರ್ಗಾ.	ರೂ. 7,68,077/– (ರೂಪಾಯಿ ಏಳು ಲಕ್ಷದ ಅರವತ್ತೆಂಟು ಸಾವಿರದ ಎಪ್ಪತ್ತೇಳು ಮಾತ್ರ)	14–05–2024	24–10–2024

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು **ಶಾಖೆಯ ಕಛೇರಿ: 'ಸೊಮಾಮೆಂಟ್', ಸಂ.9, ನೆಲ ಮಹಡಿ, ವೆಂಕಟಸ್ವಾಮಿ ನಾಯ್ಡು ಬೀದಿ, ಟಿಕ್ಕರ್ ಟೌನ್, ಶಿವಾಜಿನಗರ, ಬೆಂಗಳೂರು 560051** ಅಥವಾ **ಕಾರ್ಪೋರೇಟ್ ಕಛೇರಿ:** ಪ್ಲಾಟ್ ನಂ.98, ಫೇಸ್–IV, ಉದ್ಯೋಗ್ ವಿಹಾರ್, ಗುರ್‌ಗಾಂವ್, ಹರಿಯಾಣ ಇವರನ್ನ ಸಂಪರ್ಕಿಸಿ.

ಸ್ಥಳ: ಬೆಂಗಳೂರು, ದಿನಾಂಕ: 28–10–2024 ಸಹಿ/– ಅಧಿಕೃತ ಅಧಿಕಾರಿ, ಐಐಎಫ್‌ಎಲ್ ಹೋಮ್ ಫೈನಾನ್ಸ್ ಲಿಮಿಟೆಡ್.

ಸುದ್ದಿ ಸಿಂಚನ

ಸಿಪಿವೈ ಗೆದ್ದರ